**ಓ ಎಸ್ ನಂಃ 236/2022**
**ಪಿ ಡಬ್ಲ್ಯೂ ಃ 1**

**ದಿಃ 23.10.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀಮತಿ ಹೆಚ್ ಎಸ್ ಪಿ ವಕೀಲರಿಂದಃ**

ಈ ದಾವೆಯನ್ನು ಸಲ್ಲಿಸಲು ಮಾಹಿತಿಯನ್ನು ನಮ್ಮ ತಂದೆಯವರಾದ ವಾದಿಯು ನೀಡಿರುತ್ತಾರೆ. ಕಳೆದ ಸುನಾವಣೆಯಲ್ಲಿ ವಾದಿಯು ತಮ್ಮ ಜೊತೆ ನ್ಯಾಯಾಲಯಕ್ಕೆ ಬಂದಿರುತ್ತಾರೆ ಎಂದರೆ ಸರಿ. ವಾದಿಯು ಈ ದಾವೆಯನ್ನು 3 ಷೆಡ್ಯೂಲ್ ಸ್ವತ್ತುಗಳಿಗೆ ಸಂಬಂಧಪಟ್ಟಂತೆ ಸಲ್ಲಿಸಿರುತ್ತಾರೆ. ದಾವಾ ಸ್ವತ್ತುಗಳು ಮೂಲತಃ ಮರಿಹೊನ್ನಯ್ಯ ರವರಿಗೆ ಸೇರಿದ ಸ್ವತ್ತುಗಳು. ದಾವಾ ಸ್ವತ್ತುಗಳು ಮರಿಹೊನ್ನಯ್ಯ ರವರಿಗೆ ಯಾವ ಮುಖಾಂತರ ಬಂದಿವೆ ಎಂದರೆ ಸಾಕ್ಷಿಯು ಒಂದು ಸ್ವತ್ತು ಕ್ರಯದ ಮೂಲಕ ಮತ್ತೆರಡು ಸ್ವತ್ತುಗಳು ಪಿತ್ರಾರ್ಜಿತ ವಾಗಿ ಬಂದಿದೆ ಎಂದು ನುಡಿಯುತ್ತಾರೆ. ಕ್ರಯಕ್ಕೆ ಪಡೆದ ಸ್ವತ್ತು ಯಾವ ದಿನಾಂಕದಂದು ಕ್ರಯ ಪತ್ರ ಮಾಡಿಕೊಂಡಿದ್ದಾರೆ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಕ್ರಯ ಪತ್ರವನ್ನು ತಾವು ನೋಡಿರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿ ನಂ. 1 ಕ್ಕೆ ಸಂಬಂಧಿಸಿದ ಕ್ರಯ ಪತ್ರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸುತ್ತೀರ ಎಂದರೆ ಸಾಕ್ಷಿ ನಮ್ಮ ತಂದೆಯವರಿಗೆ ಗೊತ್ತು ಎಂದು ನುಡಿಯುತ್ತಾರೆ. ತಮಗೆ ದಾವಾ ಆಸ್ತಿ ಐಟಂ ನಂ. 1 ರ ಸ್ವತ್ತಿಗೆ ಸಂಬಂಧಪಟ್ಟಂತೆ ತಮಗೆ ಖುದ್ದಾಗಿ ಮಾಹಿತಿ ಇಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಯ ಐಟಂ ನಂ. 1 ರ ಸರ್ವೆ ನಂ. 336 ವಿಸ್ತೀರ್ಣ 4 ಎಕರೆ 4 ಗುಂಟೆ ಜಮೀನು. ದಾವಾ ಆಸ್ತಿಯ ಐಟಂ ನಂ. 2 ರ ಸರ್ವೆ ನಂ. ನನಗೆ ಗೊತ್ತು ಅದರ ವಿಸ್ತೀರ್ಣ ಮತ್ತು ಚಕ್ಕುಬಂದಿ ನನಗೆ ಗೊತ್ತಿಲ್ಲ. ದಾವಾ ಆಸ್ತಿಯ ಐಟಂ ನಂ. 3 ರ ಸ್ವತ್ತಿನ ಖಾತೆ ನಂ. ನನಗೆ ಗೊತ್ತಿಲ್ಲ. ವಿಸ್ತೀರ್ಣ 100 x 80 ಅಡಿಗಳು ಇದ್ದು ಹೊನ್ನಪ್ಪ, ಹೊನ್ನಾಣಯ್ಯ ಮತ್ತು ಹೊನ್ನಸ್ವಾಮಿ ಮನೆಗಳನ್ನು ಕಟ್ಟಿಕೊಂಡು ವಾಸವಾಗಿದ್ದಾರೆ. ಯಾವಾ ಆಧಾರದ ಮೇರೆಗೆ ಹೊನ್ನಪ್ಪ, ಹೊನ್ನಾಣಯ್ಯ ಮತ್ತು ಹೊನ್ನಸ್ವಾಮಿ ಮನೆಗಳನ್ನು ಕಟ್ಟಿಕೊಂಡಿದ್ದಾರೆ ಎಂದರೆ ಸಾಕ್ಷಿಯು ಮನೆಗಳನ್ನು ಕಟ್ಟಿಕೊಂಡಿರುವ ವಿಚಾರ ನನಗೆ ಗೊತ್ತು ಎಂದು ನುಡಿಯುತ್ತಾರೆ.

**ಮುಂದುವರೆದ ಪಾಟೀ ಸವಾಲುಃ ಕಾಲಾವಕಾಶ ಕೋರಿದ್ದಾರೆ ನೀಡಲಾಗಿದೆ.**

**(ಉಕ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಎ ಓ**

**ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,**
**ಮಾಗಡಿ.**